**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು**

***ಎಸ್.ಸಿ.* 81/2020**

| | | |
|---|---|---|
| ಸಾಕ್ಷಿದಾರರ ಹೆಸರು | ಃ **ಶಹಾಬುದ್ದೀನ್** | *ಪ್ರಮಾಣ ಮಾಡಿದ ದಿನಾಂಕಃ* |
| ತಂದೆ ಹೆಸರು | ಃ **ಮಕ್ಬುಲ್ ಅಹಮ್ಮದ** | **02.11.2022** |
| ವಯಸ್ಸು | ಃ **34** ವರ್ಷ | |
| ವೃತ್ತಿ | ಃ **ಖಾಸಗಿ ಕೆಲಸ** | **ಪಿಡಬ್ಲ್ಯೂ ಃ 05** |
| ವಾಸ ಸ್ಥಳ | ಃ **ಮೈಸೂರು** | **ಸಿಡಬ್ಲ್ಯೂ ಃ 07** |

***ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ***

**ಪ್ರಾಸಾ-1 ಮತ್ತು ಚಾಸಾ-6 ಗೊತ್ತು. ಆರೋಪಿಗಳ ಪರಿಚಯ ಇಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ಮಹಜರನ್ನು ಬರೆದಿರುವುದಿಲ್ಲ. ಈ ಪ್ರಕರಣದಲ್ಲಿ ನನಗೆ ಏನೂ ಗೊತ್ತಿಲ್ಲ. ಈಗ ತೋರಿಸಿದ ನಿಪಿ-1 ಮಹಜರನಲ್ಲಿ ನನ್ನ ರುಜು ಇದೆ. ಸಾಕ್ಷಿ ರುಜುವನ್ನು ನಿಪಿ-1(ಬಿ) ಎಂದು ಗುರುತಿಸಿದೆ. ಈಗ ಎರಡು ವರ್ಷಗಳ ಹಿಂದೆ ನಾನು ಠಾಣೆಗೆ ಹೋಗಿದ್ದಾಗ ನನ್ನ ರುಜು ಪಡೆದಿದ್ದರು. ಬೇರೆ ಏನು ಗೊತ್ತಿಲ್ಲ.**

***(ಈ ಹಂತದಲ್ಲಿ, ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸರ್ಕಾರಿ ಅಭಿಯೋಜಕರು ಅನುಮತಿ ಕೇಳುತ್ತಾರೆ. ಸಾಕ್ಷಿಯು ಪೋಲೀಸರ ಎದುರಿನ ಹೇಳಿಕೆಯ ಪ್ರತಿಕೂಲವಾಗಿ ನುಡಿಯುತ್ತಿರುವುದರಿಂದ ಅನುಮತಿ ನೀಡಲಾಯಿತು.)***

***ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-***

**2. ದಿನಾಂಕ 17.01.2020ರಂದು 1ನೇ ಆರೋಪಿ ನನ್ನನ್ನು, ಪೊಲೀಸರನ್ನು ಆತನ ಮನೆಗೆ ಕರೆದುಕೊಂಡು ಹೋಗಿದ್ದು, ಅಲ್ಲಿ ಒಬ್ಬ ಸ್ಕೂಟರ್ ಸವಾರನಿಂದ ರೂ.85,000/- ಹಣ ಮತ್ತು ಚಾಲನಾ ಪರವಾನಿಗೆಗಳನ್ನು ದರೋಡೆ ಮಾಡಿದ್ದು, ನಂತರ ಜೂಮ್ ಕಾರ ಬುಕ್ ಮಾಡಲು ಸದರಿ ಸ್ಕೂಟರ್ ಸವಾರನಿಂದ ದರೋಡೆ ಮಾಡಿದ್ದ ಹಣ ಮತ್ತು ಚಾಲನಾ ಪರವಾನಿಗೆಯನ್ನು ಮನೆಯಲ್ಲಿ ಇಟ್ಟಿದ್ದು, ಅದನ್ನು ಹಾಜರುಪಡಿರುತ್ತಾನೆ ಎಂದರೆ ಸರಿಯಲ್ಲ. ಮಹಜರಗೆ ನಾನು 1ನೇ ಆರೋಪಿಯ ಮನೆಯಲ್ಲಿ ರುಜು ಮಾಡಿದ್ದೇನೆ, ಠಾಣೆಯಲ್ಲಿ ಅಲ್ಲ ಎಂದರೆ ಸರಿಯಲ್ಲ.**

**ಈಗ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಇದೇ ರೀತಿ ನಾನು ಪೊಲೀಸರಿಗೆ ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ಹೇಳಿಕೆಯನ್ನು ನಿಪಿ-6 ಎಂದು ಗುರುತಿಸಿದೆ.**

**ಪಾಟೀ ಸವಾಲು : ಆರೋಪಿ ಪರ ವಕೀಲರಿಂದಃ- ಇಲ್ಲ**

*ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.*

**ಓ ಹೇ ಕೇ ಸ ಇ ಎ ಒ.,**

**02.11.2022.**
**(ಎಂ.ಎಲ್. ರಘುನಾಥ್)**
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಮೈಸೂರು.**